**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ**: ಕೋವಿಡ್ 19 ಪತ್ತೆ ಹಚ್ಚಲು ನಡೆಸಲು ಆರ್ ಟಿ – ಪಿ ಸಿ ಆರ್, ಟ್ರೂ –ನ್ಯಾಟ್, ಸಿ ಬಿ ನ್ಯಾಟ್, ರ್ಯಾಪಿಡ್ ಆಂಟಿಜೆನ್ ಹಾಗೂ ರ್ಯಾಪಿಡ್ ಆ್ಯಂಟಿಬಾಡಿ ಪರೀಕ್ಷೆಗಳ ದರವನ್ನು ಕರ್ನಾಟಕ ರಾಜ್ಯದಲ್ಲಿ ಮರುನಿಗದಿಪಡಿಸಿರುವ ಬಗ್ಗೆ.

**ಓದಲಾಗಿದೆ:** (1) ಸುತ್ತೋಲೆ ಸಂಖ್ಯೆ:HFW 74 ACS 2020, ದಿನಾಂಕ: 31.3.2020
(2) ಸುತ್ತೋಲೆ ಸಂಖ್ಯೆ : HFW 89 CGM 2020, ದಿನಾಂಕ: 17.4.2020
(3) ಆದೇಶ ಸಂಖ್ಯೆ :HFW 264 ACS 2020, ದಿನಾಂಕ: 24.07.2020
(4) ಆದೇಶ ಸಂಖ್ಯೆ :HFW 307 ACS 2020, ದಿನಾಂಕ: 17.08.2020
(5) ಆದೇಶ ಸಂಖ್ಯೆ : HFW 363 ACS 2020, ದಿನಾಂಕ: 24.09.2020

********

**ಪ್ರಸ್ತಾವನೆ** :

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳಲ್ಲಿ ಕೋವಿಡ್-19 ಪರೀಕ್ಷೆಗಳನ್ನು ನಡೆಸಲು ಮಾರುಕಟ್ಟೆಯಲ್ಲಿ ಲಭ್ಯವಿರುವ ರಾಸಾಯನಿಕ ಹಾಗೂ ಇತರ ಅಗತ್ಯ ವಸ್ತುಗಳ ದರಗಳನ್ನು ಪರಿಗಣಿಸಿ, ರಾಜ್ಯ ಸರ್ಕಾರವು ಖಾಸಗಿ ಪ್ರಯೋಗಶಾಲೆಗಳಲ್ಲಿ ವಿಧಿಸಬಹುದಾದ ಕೋವಿಡ್ ಪರೀಕ್ಷೆಗಳ ದರಗಳನ್ನು ಕಾಲಕಾಲಕ್ಕೆ ಮರು ಪರಿಶೀಲಿಸಿ ನಿಗದಿಪಡಿಸಿರುತ್ತದೆ. ಅಲ್ಲದೆ, ರಾಸಾಯನಿಕ ಹಾಗೂ ಇತರ ಅಗತ್ಯ ವಸ್ತುಗಳ ದರಗಳು ಕಡಿಮೆಯಾಗಿರುವುದರಿಂದ ಈ ವಿಷಯವನ್ನು ಮತ್ತೆ ರಾಜ್ಯ ಮಟ್ಟದ ಕೋವಿಡ್-19 ತಾಂತ್ರಿಕ ಸಲಹಾ ಸಮಿತಿಯು ಮರು ಪರಿಶೀಲಿಸಿ ರಾಜ್ಯ ಸರ್ಕಾರಕ್ಕೆ ಹೊಸದಾಗಿ ತನ್ನ ಶಿಫಾರಸ್ಸನ್ನು ಸಲ್ಲಿಸಿರುತ್ತದೆ. ರಾಜ್ಯದ ಖಾಸಗಿ ಪ್ರಯೋಗಶಾಲೆಗಳಲ್ಲಿ ಕೈಗೊಳ್ಳುವ/ನಡೆಸುವ ಕೋವಿಡ್-19 ಪರೀಕ್ಷೆಗಳಿಗೆ ಈ ಕೆಳಕಂಡಂತೆ ಗರಿಷ್ಠ ದರಗಳನ್ನು ನಿಗದಿಪಡಿಸಿ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಕುಕ 432 ಅಮುಕಾ 2020**

**ಬೆಂಗಳೂರು, ದಿನಾಂಕ: 9.12.2020**

ಸದರಿ ಆದೇಶವನ್ನು ಕರ್ನಾಟಕ ಸಾಂಕ್ರಾಮಿಕ ರೋಗಗಳ ಕಾಯ್ದೆ 2020ರ ಸೆಕ್ಷನ್ 4 ಮತ್ತು 5 ರ ಅಡಿಯಲ್ಲಿ ಹಾಗೂ ಕರ್ನಾಟಕ ಸಾಂಕ್ರಾಮಿಕ ರೋಗಗಳ (ಕೋವಿಡ್-19) ರೆಗ್ಯುಯಲೇಷನ್ 2020, ಅಧಿಸೂಚನೆ ಸಂಖ್ಯೆ: ಆಕುಕ 54 ಸಿಜಿಎಂ 2020, ದಿನಾಂಕ: 11.3.2020ರ ಸೆಕ್ಷನ್-7 ಅಡಿಯಲ್ಲಿ ಮತ್ತು ಕರ್ನಾಟಕ ಸಾಂಕ್ರಾಮಿಕ ರೋಗಗಳ (ಕೋವಿಡ್-19) ರೆಗ್ಯುಯಲೇಷನ್ 2020, ಅಧಿಸೂಚನೆ ಸಂಖ್ಯೆ: ಆಕುಕ 54 ಸಿಜಿಎಂ 2020, ದಿನಾಂಕ:20.3.2020ರ ಸೆಕ್ಷನ್-3 ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಖಾಸಗಿ ಪ್ರಯೋಗಾಲಯಗಳು ವಿವಿಧ ಕೋವಿಡ್-19 ಪರೀಕ್ಷಾ ವಿಧಾನಗಳ (Techniques) ಅಡಿಯಲ್ಲಿ ಪರೀಕ್ಷೆಗಳನ್ನು ನಡೆಸಲು ಈ ಕೆಳಕಂಡಂತೆ ಹೊಸ ದರಗಳನ್ನು ನಿಗದಿಪಡಿಸಿ ಆದೇಶ ಹೊರಡಿಸಲಾಗಿದೆ.

ಕೋವಿಡ್ 19 ಪರೀಕ್ಷಾ ಹೊಸ ದರಗಳು ಈ ಕೆಳಕಂಡಂತಿವೆ.

| ಕ್ರಮ ಸಂಖ್ಯೆ | ಪರೀಕ್ಷಾ ವಿಧಾನ | ಸ್ಕ್ರೀನಿಂಗ್ ಪರೀಕ್ಷೆ ಹಾಗೂ ಖಚಿತ ಪರೀಕ್ಷೆಗಳಿಗೆ ಮರು ನಿಗದಿ ಪಡಿಸಿರುವ ಗರಿಷ್ಠ ದರ , ಪಿಪಿಇ ಕಿಟ್‌ನ ದರವನ್ನೂ ಒಳಗೊಂಡಂತೆ |
|---|---|---|
| 1 | ಆರ್‌ಟಿ – ಪಿಸಿಆರ್ ಪರೀಕ್ಷೆ : ಸರ್ಕಾರಿ ಆಸ್ಪತ್ರೆಗಳಿಂದ ಖಾಸಗಿ ಪ್ರಯೋಗಶಾಲೆಗಳಿಗೆ ಮಾದರಿಗಳನ್ನು ಕಳುಹಿಸಿದಾಗ | ರೂ: 500/- |
| 2 | ಆರ್‌ಟಿ – ಪಿಸಿಆರ್ ಪರೀಕ್ಷೆ : ಖಾಸಗಿ ಆಸ್ಪತ್ರೆಗಳಿಂದ ಸ್ವೀಕೃತವಾದ ಮಾದರಿಗಳನ್ನು ಖಾಸಗಿ ಪ್ರಯೋಗಶಾಲೆಗಳಲ್ಲಿ ಪರೀಕ್ಷಿಸಿದಾಗ | ರೂ: 800/- |
| 3 | ಟ್ರೂ ನ್ಯಾಟ್ ಪರೀಕ್ಷೆ: ಖಾಸಗಿ ಆಸ್ಪತ್ರೆಗಳಿಂದ ಸ್ವೀಕೃತವಾದ ಮಾದರಿಗಳನ್ನು ಖಾಸಗಿ ಪ್ರಯೋಗಶಾಲೆಗಳಲ್ಲಿ ಪರೀಕ್ಷಿಸಿದಾಗ | ರೂ: 1250/- |
| 4 | ಸಿ ಬಿ ನ್ಯಾಟ್ ಪರೀಕ್ಷೆ : ಖಾಸಗಿ ಆಸ್ಪತ್ರೆಗಳಿಂದ ಸ್ವೀಕೃತವಾದ ಮಾದರಿಗಳನ್ನು ಖಾಸಗಿ ಪ್ರಯೋಗಶಾಲೆಗಳಲ್ಲಿ ಪರೀಕ್ಷಿಸಿದಾಗ | ರೂ:2400/- |
| 5 | ರ್‍ಯಾಪಿಡ್ ಆಂಟಿಜೆನ್ ಪರೀಕ್ಷೆ : ಖಾಸಗಿ ಪ್ರಯೋಗಶಾಲೆ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ | ರೂ: 400/- |
| 6 | ರ್‍ಯಾಪಿಡ್ ಆ್ಯಂಟಿಬಾಡಿ ಪರೀಕ್ಷೆ (IgG ELISA) : ಖಾಸಗಿ ಪ್ರಯೋಗಶಾಲೆ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ | ರೂ: 500/- |

*ಈ ಎಲ್ಲಾ ಪರೀಕ್ಷೆಗಳ ಮಾದರಿಯನ್ನು ಮನೆಯಿಂದ ಸಂಗ್ರಹಿಸಬೇಕಾದಲ್ಲಿ ಒಂದು ಮನೆಯ ಸಂಗ್ರಹ ದರ ರೂ.400/–ನ್ನು ಮೀರಬಾರದು.

ಆರ್‌ಟಿಪಿಸಿಆರ್, ಟ್ರೂ –ನ್ಯಾಟ್, ಸಿಬಿನ್ಯಾಟ್, ರ್‍ಯಾಪಿಡ್ ಆಂಟಿಜೆನ್ ಹಾಗೂ ರ್‍ಯಾಪಿಡ್ ಆ್ಯಂಟಿಬಾಡಿ ಪರೀಕ್ಷೆಗಳನ್ನು ಐಸಿಎಂಆರ್ ಪ್ರಮಾಣಿತ ಪ್ರಯೋಗಶಾಲೆಗಳಲ್ಲಿಯೇ ನಡೆಸುವುದು ಹಾಗೂ ಕೋವಿಡ್–19 ಪರೀಕ್ಷೆಗಳನ್ನು ನಡೆಸುವ ಸಂಬಂಧ, ಐಸಿಎಂಆರ್ ಹಾಗೂ ರಾಜ್ಯ ಸರ್ಕಾರವು ವಿಧಿಸಿರುವ ಎಲ್ಲಾ ಷರತ್ತುಗಳು ಈ ಪ್ರಯೋಗಶಾಲೆಗಳಿಗೆ ಅನ್ವಯಿಸುತ್ತವೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಜಾವೇದ್ ಅಖ್ತರ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

**ಇವರಿಗೆ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ
2. ಆಯುಕ್ತರು, ಬಿ ಬಿ ಎಂ ಪಿ
3. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು
4. ಅಭಿಯಾನ ನಿರ್ದೇಶಕರು–ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂಗಳೂರು
5. ಎಲ್ಲಾ ಜಿಲ್ಲಾ ಜಿಲ್ಲಾಧಿಕಾರಿಗಳು / ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಯ, ಜಿಲ್ಲಾ ಪಂಚಾಯತ್
6. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು
7. ನಿರ್ದೇಶಕರು, ವೈದ್ಯಕೀಯ ಶಿಕ್ಷಣ
8. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು/ ಜಿಲ್ಲಾ ಸರ್ಜನರು – ಎಲ್ಲಾ ಜಿಲ್ಲೆಗಳು
9. ಕೋವಿಡ್ 19 ಪರೀಕ್ಷೆಗಳನ್ನು ನಡೆಸುವ ಎಲ್ಲಾ ಖಾಸಗಿ ಪ್ರಯೋಗಶಾಲೆಗಳು.